ಎರೆಯತಿರ್ಪರ್' ಎಂದು ಕಂತಿಯಂತೆ (ಇದೊಂದು ಸಮಸ್ಯೆಯೇ ಅಲ್ಲವೆಂಬಂತೆ) ಬಿಡಿಸಿ ಕಳಿಸಿಕೊಟ್ಟೆ. ಕೂಡಲೆ ಆ ಕಡೆಯಿಂದ ಥಮ್ಸ್ ಅಪ್ ಚಿಹ್ನೆ ಬಂತು.

ಕಸಬರಿಗೆಯನ್ನು ಮೆಟ್ಟಿದರೆ, ಸಿಗುವ ಮೂರುಕಾಸಿನ ಪುಣ್ಯವೂ ಹೊರಟುಹೋಗುವುದೆಂದು ನನ್ನಜ್ಜಿ ಹೇಳುತ್ತಿದ್ದಳು. ವರ್ಷಾವಧಿ ಊರಿನ ಮಾರಿ ನೂಕುವ ಕುಕ್ಕೆಗೆ ಬೇರೆ ಕಸಗಳ ಜೊತೆಗೆ ಗುಡಿಸೀ ಗುಡಿಸೀ ತಾನೇ ಕಸವಾದ ಒಂದು ಮೋಟು ಕಸಬರಿಗೆ ಬೇಕೇ ಬೇಕಿತ್ತು. ಗ್ರಾಮದ ಗಡಿಯಲ್ಲಿ ಈ ಕಸಗಳನ್ನೆಲ್ಲ ಸೂರ್ಯ ಹುಟ್ಟುವ ಮೊದಲೇ ಸುರಿದು ಬಂದರೆ ಆ ವರ್ಷದ ಕಾಯಿಲೆ ಕಸಾಲೆ ಮಾರಿಗಳು ಈ ಕಸದೊಂದಿಗೆ ತೊಲಗಿದವೆಂದೇ ಅರ್ಥ. ಕಸವನ್ನು ಮಾತ್ರವಲ್ಲದೆ ಸೋಂಕುಮಾರಿಗಳನ್ನು ಗುಡಿಸಿ ಓಡಿಸಲೂ ಎಲ್ಲೆಲ್ಲು ಸಲ್ಲುವ ಈ ಮೋಟು ಹಿಡಿಗಳು ಬೇಕೇಬೇಕಿತ್ತು. ಇದೇ ಕಾರಣಕ್ಕೆ ಇರಬೇಕು ಯಾವುದೋ ಒಂದು ಸಂಸ್ಥೆ ಸಮಾಜಸೇವೆ ಮಾಡುವವರನ್ನು ಗುರುತಿಸಿ 'ಮೋಟುಹಿಡಿ' ಪ್ರಶಸ್ತಿ ಕೊಟ್ಟು ಗೌರವಿಸುತ್ತಿದೆಯಂತೆ. 'ಮಲಗಿದ ಕೂಸಿನ ನಿದ್ದೆಯ ಕಸವನು ಗುಡಿಸುವನು ಕಣ್ ಬಿಡಿಸುವನು' ಎಂದು ಪಂಜೆಯವರು ತಮ್ಮ 'ಉದಯರಾಗ' ಕವಿತೆಯಲ್ಲಿ, ಜಗವನ್ನು ಪೊರೆಯುವ ರವಿಯನ್ನು ನಿದ್ದೆಯ ಕಸವನ್ನು ಗುಡಿಸುವ ಪೊರಕೆಯನ್ನಾಗಿಸಿಬಿಟ್ಟದ್ದು 'ರವಿ ಕಾಣದ್ದನ್ನು ಕವಿ ಕಂಡ' ಎಂಬ ಮಾತಿಗೆ ಸಾಕ್ಷಿ ಒದಗಿಸುವಂತಿದೆ.

